ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ

ಸಹ ಪಯಣ

ಬೆಂಗಳೂರು ಶಿಕ್ಷಣ ಕೇಂದ್ರದ ತ್ರೈಮಾಸಿಕ ವಾರ್ತಾಪತ್ರ

ಸಂಪುಟ ೩೦ ಮೇ ೨೦೨೪ ಸಂಚಿಕೆ ೪

"ತನ್ನನ್ನು ತಾನು ಅರಿಯುವುದಕ್ಕೆ ಯಾವುದೇ ಸಿದ್ಧಸೂತ್ರಗಳಿಲ್ಲ. ಮನೋವಿಶ್ಲೇಷಕನ ಬಳಿಗೋ, ಮನೋವಿಜ್ಞಾನಿಯ ಬಳಿಗೋ ಹೋಗಿ ನಿಮ್ಮ ಬಗ್ಗೆ ನೀವು ತಿಳಿಯಬಹುದು. ಆದರಿಂದ ನಿಮ್ಮ ಬಗ್ಗೆ ನೀವು ತಿಳಿದಂತಾಗುವುದಿಲ್ಲ. ನಾವು ಯಾರು ಎಂದು ತಿಳಿಯಬೇಕಾದರೆ ಸಂಬಂಧಗಳಲ್ಲಿಯೇ ನಮ್ಮನ್ನು ನಾವು ಕಂಡುಕೊಳ್ಳಬೇಕು."

ಜೆ ಕೃಷ್ಣಮೂರ್ತಿ

ಸಂವಾದ: ಪ್ರಶ್ನೋತ್ತರಗಳು

ಪ್ರಶ್ನೆ : ನಮ್ಮನ್ನು ನಾವು ಅರಿಯುವುದು ಹೇಗೆ?

ಕೃಷ್ಣಮೂರ್ತಿ: ನಿಮ್ಮ ಮುಖ ಹೇಗಿದೆಯೆಂದು ನಿಮಗೆ ಗೊತ್ತು. ಏಕೆಂದರೆ ಆಗಾಗ ಕನ್ನಡಿಯಲ್ಲಿ ಅದರ ಪ್ರತಿಬಿಂಬವನ್ನು ನೋಡುತ್ತೀರಿ. ಅದರ ಹಾಗೆಯೇ ನಿಮ್ಮ ಸಮಗ್ರ ಸ್ವರೂಪವನ್ನೇ ಕಾಣಬಲ್ಲ ಕನ್ನಡಿ ಇನ್ನೊಂದಿದೆ. ಅಲ್ಲಿ ನಿಮ್ಮ ಆಲೋಚನೆ, ಭಾವನೆ, ಹಂಬಲ, ಹಾರೈಕೆ, ತುಡಿತ ಮಿಡಿತಗಳು ಹೀಗೆ ಪ್ರತಿಯೊಂದು ಸಂಗತಿಯನ್ನೂ ಕಾಣಬಹುದು. ಅದು ಮನುಷ್ಯ ಸಂಬಂಧಗಳ ಕನ್ನಡಿ; ನಿಮ್ಮ ತಂದೆತಾಯಿಗಳು, ಅಧ್ಯಾಪಕರು, ನದಿಗಳು, ಮರಗಳು, ನಿಮ್ಮದೇ ಆಲೋಚನೆಗಳು ಇವೆಲ್ಲದರ ಸಂಗಡ ನೀವು ಹೊಂದಿರುವ ಸಂಬಂಧಗಳೆಂಬ ಕನ್ನಡಿ. ಸಂಬಂಧಗಳಲ್ಲಿ ನಿಮ್ಮನ್ನು ನೀವು ಕಾಣಬಹುದು. ನೀವು ಅಪೇಕ್ಷಿಸುವಂತೆ ಅಲ್ಲ , ಇರುವಂತೆ. ಅನುದಿನವೂ ಬಳಸುವ ಸಾಮಾನ್ಯ ಕನ್ನಡಿಯಲ್ಲಿ ನೋಡಿಕೊಳ್ಳುವಾಗ ಅದು ಚೆಲುವನೊಬ್ಬನನ್ನು ತೋರಿಸಲೆಂದು ಹಂಬಲಿಸಬಹುದು. ಅದು ಸಾಧ್ಯವಾಗುವುದಿಲ್ಲ. ಏಕೆಂದರೆ ಕನ್ನಡಿ ಕಾಣಿಸುವುದು ಯಥಾವತ್ ಪ್ರತಿಬಿಂಬವನ್ನು ಮಾತ್ರ. ನನಗೆ ಸ್ವಯಂ ವಂಚನೆ ಸಾಧ್ಯವಾಗುವುದಿಲ್ಲ. ಅದೇ ರೀತಿಯಲ್ಲಿ ಇತರರೊಂದಿಗಿನ ಸಂಬಂಧಗಳ ಕನ್ನಡಿಯಲ್ಲಿಯೂ ನಾನು ಕಾಣುವುದು ಇರುವ ಹಾಗೆಯೇ. ಅನ್ಯರೊಂದಿಗೆ ನಾವು ಮಾತನಾಡುವ ಬಗೆಯನ್ನೇ ಗಮನಿಸಿ.

ನನಗೆ ಉಪಕಾರ ಮಾಡಬಲ್ಲವರೊಂದಿಗೆ ನಾನು ವಿನಯದ ಅಪರಾವತಾರ. ಅಪ್ರಯೋಜಕರಿಗೆ ನಾನು ತಿರಸ್ಕಾರ. ಒರಟು ತನಗಳ ಸಾಕ್ಷಾತ್ ಸ್ವರೂಪ. ನನ್ನನ್ನು ಹೆದರಿಸಬಲ್ಲವರೆದುರು ನನಗೆ ಮೈಯೆಲ್ಲ ಕಿವಿ ಅಂಥ ಮಹನೀಯರು ಆಗಮಿಸಿದಾಗ ನಾನು ಎದ್ದು ನಿಲ್ಲುತ್ತೇನೆ. ಆದರೆ ಯಾರೋ ಸೇವಕ ಒಳಗೆ ಬಂದರೆ, ಬಂದರೆ ಬಂದ ನನಗೇನಂತೆ. ನೋಡಿ. ಅನ್ಯರೊಂದಿಗಿನ ನನ್ನ ಸಂಬಂಧಗಳನ್ನು ಅವಲೋಕಿಸುವುದರಿಂದಲೇ ನನ್ನದು ಎಂಥ ಹುಸಿ ವಿನಯವೆಂಬ ಸಂಗತಿ ನಿಚ್ಚಳವಾಗುತ್ತದೆ. ಅಲ್ಲವೇ? ಹಾಗೆಯೇ ಮರಗಳು, ಹಕ್ಕಿಗಳು, ಪುಸ್ತಕಗಳು ಮತ್ತು ವಿಚಾರಗಳು ಇವೆಲ್ಲದರೊಂದಿಗಿನ ನನ್ನ ಸಂಬಂಧದ ಸ್ವರೂಪವನ್ನು ಕಂಡುಕೊಳ್ಳಬಹುದು.

ನಿಮ್ಮ ಬಳಿ ಪ್ರಪಂಚದಲ್ಲಿರುವ ಎಲ್ಲ ಪದವಿಗಳೂ ಇರಬಹುದು. ಆದರೆ ಸ್ವಸ್ವರೂಪ ಜ್ಞಾನವಿಲ್ಲದಿದ್ದರೆ ನಿಮಗಿಂತ ಮೂರ್ಖರು ಮತ್ತೊಬ್ಬರಿಲ್ಲ. ತನ್ನನ್ನು ತಾನು ಅರಿಯುವುದು ಎಲ್ಲ ಶಿಕ್ಷಣದ ಮೂಲ ಉದ್ದೇಶ. ಸ್ವಯಂ ಜ್ಞಾನವಿಲ್ಲದೆ ಸಂಹಿತೆಗಳನ್ನು ಸಂಗ್ರಹಿಸುವುದಾಗಲಿ, ಪರೀಕ್ಷೆಯಲ್ಲಿ ಪಾಸಾಗಲೆಂದು ಟಿಪ್ಪಣಿ ತೆಗೆದುಕೊಳ್ಳುವುದಾಗಲಿ ಅಸ್ತಿತ್ವದ ಅರ್ಥಹೀನ ಸ್ಥಿತಿ. ಭಗವದ್ಗೀತೆ, ಉಪನಿಷತ್ತು, ಕೊರಾನ್, ಬೈಬಲ್‌ಗಳನ್ನು ಕಂಠಪಾಠ ಒಪ್ಪಿಸಲು ಸಾಧ್ಯವಾಗಬಹುದು. ನಿಮ್ಮ ಅರಿವು ಇಲ್ಲದೆ ಹೋದಾಗ ಅದು ಕೇವಲ ಗಿಳಿಪಾಠ. ಬದಲಾಗಿ, ಎಷ್ಟೇ ಅಲ್ಪಪ್ರಮಾಣದಲ್ಲಾದರೂ ಸರಿ. ಸ್ವ ಜ್ಞಾನದ ಹಾದಿಯಲ್ಲಿ ಹೆಜ್ಜೆಹಾಕಿದಾಗ ನಿಮ್ಮಲ್ಲಿ ಅತಿ ವಿಶಿಷ್ಟವಾದ ಸೃಜನಶೀಲ ಪ್ರಕ್ರಿಯೆಯು ಮೊದಲಾಗುತ್ತದೆ. ಇದ್ದಕ್ಕಿದ್ದಂತೆ ನಿಮ್ಮ ನಿಜ ಸ್ವರೂಪವನ್ನು ಕಂಡುಕೊಳ್ಳುವುದು ಅಚ್ಚರಿಯ ಅನುಭವ; ಆಸೆಬುರುಕ, ಜಗಳಗಂಟ, ಕೋಪಿಷ್ಠ, ದಡ್ಡ, ಹೊಟ್ಟೆ ಕಿಚ್ಚಿನ ಮೊಟ್ಟೆಕೋಳಿ. ಈ

ವಾಸ್ತವತೆಯನ್ನು ಬದಲಿಸಲು ಪ್ರಯತ್ನಿಸದೆ, ಸುಮ್ಮನೆ ಗಮನಿಸುವುದು ವಿಸ್ಮಯಕರ ಸಾಕ್ಷಾತ್ಕಾರ. ಅಲ್ಲಿಂದ ಆಚೆಗೆ, ಆಳವಾಗಿ, ಇನ್ನಷ್ಟು ಆಳವಾಗಿ ಅನಂತವಾಗಿ ಶೋಧಿಸಲು ಸಾಧ್ಯ. ಏಕೆಂದರೆ ಆತ್ಮಜ್ಞಾನಕ್ಕೆ ಅಂತ್ಯವೇ ಇಲ್ಲ.

ಸ್ವ ಜ್ಞಾನದ ಮೂಲಕ ಮೊದಲು ಮಾಡಿದಾಗ, ದೇವರು, ಸತ್ಯ, ಕಾಲಾತೀತ ಸ್ಥಿತಿ ಮುಂತಾದ ಸಂಗತಿಗಳ ಸ್ವರೂಪವು, ಅನುಕ್ರಮವಾಗಿ ಅನಾವರಣವಾಗುತ್ತದೆ. ನಿಮ್ಮ ಗುರುವು ತನ್ನ ಗುರುವಿನಿಂದ ಪಡೆದ ತಿಳಿವಳಿಕೆಯನ್ನು ನಿಮಗೆ ರವಾನಿಸಬಹುದು. ನೀವು, ಪರೀಕ್ಷೆಗಳಲ್ಲಿ ಚೆನ್ನಾಗಿ ಬರೆದು ಪದವಿಗಿದವಿಗಳನ್ನು ಪಡೆಯಬಹುದು.

ಆದರೆ, ಅಂತರಂಗದ ಆಳಗಳನ್ನು ಕನ್ನಡಿಯಲ್ಲಿ ಕಂಡ ನಿಮ್ಮದೇ ಮುಖದ ಹಾಗೆ ಅರಿಯದ ಹೊರತು ಉಳಿದೆಲ್ಲ ಜ್ಞಾನಕ್ಕೂ ಅತ್ಯಲ್ಪ ಅರ್ಥ.

ತಮ್ಮನ್ನು ತಾವು ತಿಳಿದುಕೊಳ್ಳದ ವಿದ್ಯಾವಂತರು ನಿಜವಾಗಿಯೂ ಮೂರ್ಖರು. ಅವರಿಗೆ ಆಲೋಚಿಸುವುದು ಗೊತ್ತಿಲ್ಲ. ಜೀವಿಸುವುದು ಗೊತ್ತಿಲ್ಲ. ಆದ್ದರಿಂದಲೇ, ಶಿಕ್ಷಕರು ಆ ಪದದ ನಿಜವಾದ ಅರ್ಥದಲ್ಲಿ ಶಿಕ್ಷಿತರಾಗುವುದು ಮುಖ್ಯ. ಹಾಗೆಂದರೆ ಅವನು ತನ್ನ ಹೃದಯ ಹಾಗೂ ಮನಸ್ಸುಗಳನ್ನು ಸ್ಪಂದಿಸುವ ಬಗೆಯನ್ನು ತಿಳಿದುಕೊಳ್ಳಬೇಕು. ಸಂಬಂಧಗಳ ಕನ್ನಡಿಯಲ್ಲಿ ತನ್ನ ತದ್ವತ್ ಸ್ವರೂಪವನ್ನು ಕಂಡುಕೊಳ್ಳಬೇಕು. ಸ್ವಯಂ ಜ್ಞಾನವು ವಿವೇಕದ ನಾಂದಿ. ಆ ತಿಳಿವಳಿಕೆಯಲ್ಲಿ ಸಮಗ್ರ ವಿಶ್ವವಿದೆ. ಅದು ಮನುಕುಲದ ಎಲ್ಲ ಹೋರಾಟಗಳನ್ನೂ ಒಳಗೊಳ್ಳುತ್ತದೆ.

ಕೃತಿ: "ಈ ಸಂಗತಿ ಕುರಿತು ಆಲೋಚನೆ ಮಾಡಿ ಅಧ್ಯಾಯ ೧೫
ಅನುವಾದ: ಎಚ್ ಎಸ್ ರಾಘವೇಂದ್ರ ರಾವ್
ಮೂಲ: **Think on These Things**



ಪ್ರಶ್ನೆ : ಸರ್, ನಾವು ಸಂಗಾತಿ ಇರಬೇಕೆಂದು ಬಯಸುವುದೇಕೆ?

ಕೃಷ್ಣಮೂರ್ತಿ : ಒಬ್ಬ ಹುಡುಗಿ ಈ ಪ್ರಶ್ನೆ ಕೇಳುತ್ತಿದ್ದಾಳೆ. ನಾವು ಸಂಗಾತಿಯನ್ನು ಬಯಸುವುದೇಕೆ? ಹೌದು, ಸಂಗಾತಿ ಯಾಕೆ ಬೇಕು? ಈ ಜಗತ್ತಿನಲ್ಲಿ ಗಂಡ ಅಥವಾ ಹೆಂಡತಿ ಇಲ್ಲದೆ, ಮಕ್ಕಳಿಲ್ಲದೆ, ಗೆಳೆಯರಿಲ್ಲದೆ ಏಕಾಂಗಿಯಾಗಿ ಬದುಕಲಾರೆವೇ? ಬಹಳಷ್ಟು ಜನ ಒಂಟಿಯಾಗಿ ಬದುಕಲಾರರು. ಆದ್ದರಿಂದ ಅವರಿಗೆ ಜೊತೆ ಬೇಕು. ಏಕಾಂಗಿಯಾಗಿ ಬದುಕಲು ಅಪಾರ ಬುದ್ಧಿಶಕ್ತಿ ಬೇಕು. ದೇವರನ್ನು ಸತ್ಯವನ್ನು ಶೋಧಿಸಲು ಏಕಾಂಗಿಯಾಗಿರುವುದು ಅನಿವಾರ್ಯ. ನಿಜ, ಸಂಗಾತಿಯಿರುವುದು ಹಿತಕರವಾದ ಅನುಭವ. ಗಂಡ, ಹೆಂಡತಿ, ಮಕ್ಕಳು ಮರಿ ಇತ್ಯಾದಿ. ಆದರೆ ನೋಡಿ, ನಾವು ಅದೆಲ್ಲದರಲ್ಲಿ ಕಳೆದುಹೋಗುತ್ತೇವೆ. ಕುಟುಂಬ, ಕೆಲಸ, ಮಂಕು ಮಂಕಾದ, ಏಕತಾನತೆ ತುಂಬಿದ ಸದಾ ಕೊಳೆಯುವ ಬದುಕು. ಇವೆಲ್ಲದರ ನಡುವೆ ನಾವು ಇಲ್ಲವಾಗುತ್ತೇವೆ. ಅದೇ ಅಭ್ಯಾಸವಾಗಿ ಬಿಡುತ್ತದೆ. ಸರಿ, ಆಮೇಲೆ ಒಂಟಿಯಾಗಿರುವ ವಿಚಾರವೇ ಭಯಾನಕ, ಅಸಹನೀಯ ನಮ್ಮಲ್ಲಿ ಬಹಳ ಮಂದಿಗೆ ಯಾವುದೋ ಒಂದು ವಿಷಯದಲ್ಲಿ ಅಪಾರ ನಂಬಿಕೆ. ಇದು ಬಿಟ್ಟರೆ ಇನ್ನೇನೂ ಇಲ್ಲ ಎನ್ನುವ ಹಾಗೆ. ನಮ್ಮ ಕೆಲಸಗಳು, ಕುಟುಂಬಗಳು ಮತ್ತು ಸಂಗಾತಿಗಳನ್ನು ಹೊರತುಪಡಿಸಿದರೆ ಜೀವನದಲ್ಲಿ ಶ್ರೀಮಂತಿಕೆಯೇ ಉಳಿಯುವುದಿಲ್ಲ. ಆದರೆ ಜೀವನದಲ್ಲಿ ನಿಜವಾದ ಸಿರಿತನ ಇದ್ದರೆ-ಹಣ ಅಥವಾ ಜ್ಞಾನದಿಂದ ಬರುವ ಶ್ರೀಮಂತಿಕೆ ಅಲ್ಲ. ಅದನ್ನು ಯಾರು ಬೇಕಾದರೂ ಸಂಪಾದಿಸಬಹುದು. ವಾಸ್ತವದ, ಅನಾದಿ ಅನಂತವಾದ ಚಲನೆಯೇ ನಿಜವಾದ ಸಿರಿತನ-ಅಂಥವನಿಗೆ ಸಂಗಾತಿವು ಅನುಷಂಗಿಕವಾಗುತ್ತದೆ. ಆದರೆ ಏನು ಮಾಡುವುದು? ನಿಮಗೆ ಏಕಾಂಗಿಯಾಗಿರಲು ಅಗತ್ಯವಾದ ಶಿಕ್ಷಣವನ್ನು ಯಾರೂ ನೀಡಿಲ್ಲ. ನೀವು ಎಂದಾದರೂ ಒಂಟಿಯಾಗಿ ವಾಕ್ ಹೋಗಿರುವಿರಾ? ಹೌದು. ಒಂಟಿಯಾಗಿ ದೂರ ದೂರ ಹೋಗುವುದು-ಪುಸ್ತಕವಿಲ್ಲದೆ, ಗೆಳೆಯರಿಲ್ಲದೆ-ಬಹಳ ಮುಖ್ಯ. ಆಗ ಮರದಿಂದ ಎಲೆಯು ಬೀಳುವುದನ್ನು ನೋಡಬಲ್ಲಿರಿ. ಅಲೆಗಳ ಕಲಕಲವನ್ನು ಕೇಳಬಲ್ಲಿರಿ. ಬೆಸ್ತರ ಹಾಡು, ಹಕ್ಕಿಯ ಹಾರುವಿಕೆ ಎಲ್ಲವೂ ನಿಮ್ಮ ಗಮನಕ್ಕೆ ಬರುತ್ತದೆ. ಅಷ್ಟೇ ಅಲ್ಲ, ನಿಮ್ಮದೇ ಮನಸ್ಸಿನ ವಿಸ್ತಾರದಲ್ಲಿ ಒಂದನ್ನೊಂದು ಹಿಂಬಾಲಿಸುತ್ತಿರುವ ವಿಚಾರಗಳನ್ನು ಗಮನಿಸಲು ಸಾಧ್ಯವಾಗುತ್ತದೆ. ಹೀಗೆ ಏಕಾಂಗಿಯಾಗಿರಲು ಈ ಸಂಗತಿಗಳನ್ನು ಗಮನಿಸಲು ಸಾಧ್ಯವಾಗುವುದಾದರೆ, ಆಗ ಅನುಪಮವಾದ ಸಿರಿತನ ನಿಮ್ಮದಾಗುತ್ತದೆ. ಅದರ ಮೇಲೆ ಯಾವ ಸರ್ಕಾರವೂ ತೆರಿಗೆ ಹಾಕಲಾರದು. ಅದನ್ನು ಯಾವ ಮನುಷ್ಯನೂ ಭ್ರಷ್ಟಗೊಳಿಸಲಾರ, ಅದು ಎಂದೆಂದಿಗೂ ನಾಶವಾಗುವುದಿಲ್ಲ.

ಕೃತಿ: "ಈ ಸಂಗತಿ ಕುರಿತು ಆಲೋಚನೆ ಮಾಡಿ"
ಅನುವಾದ: ಎಚ್ ಎಸ್ ರಾಘವೇಂದ್ರ ರಾವ್
ಮೂಲ: **Think on These Things**

ಪ್ರಶ್ನೆ: ನನ್ನ ಸಹಾಯದಿಂದ ಮತ್ತೊಬ್ಬರ ಹಸಿವು ನೀಗಿದರೆ ಅದು ಪ್ರೀತಿಯಲ್ಲವೇ?

ಕೃಷ್ಣಮೂರ್ತಿ: ಯಾರೋ ಒಬ್ಬಾತ ಹಸಿದಿದ್ದಾನೆ. ನೀನು ಅವನಿಗೆ ಅನ್ನ ಕೊಡುತ್ತೀ. ಅದು ಪ್ರೀತಿಯೇ? ಅವನಿಗೆ ಸಹಾಯ ಮಾಡಬೇಕು ಅನ್ನಿಸಿದ್ದು ಯಾಕೆ? ಹಸಿದವನಿಗೆ ಸಹಾಯ ಮಾಡಬೇಕೆನ್ನುವುದನ್ನು ಬಿಟ್ಟು ಬೇರೆ ಯಾವ ಉದ್ದೇಶವೂ ನಿನ್ನಲ್ಲಿ ಇಲ್ಲವೇ? ಹಸಿದವನಿಗೆ ಅನ್ನ ನೀಡುವುದರಿಂದ ನಿನಗೆ ಏನಾದರೂ ಲಾಭ ದೊರೆಯಲಿ ಎಂದು ಬಯಸಿದ್ದೀಯೋ ಹೇಗೆ? ಸುಮ್ಮನೆ ಹೌದು ಅಥವ ಇಲ್ಲ ಅನ್ನಬೇಡ. ಇದನ್ನು ಯೋಚನೆಮಾಡಿನೋಡು. ರಾಜಕೀಯ ಲಾಭವೋ, ಅಂತರಂಗದ, ಬಹಿರಂಗದ ಯಾವುದೋ ಲಾಭವೋ ದೊರೆಯಲಿ ಎಂದು ಮನಸ್ಸಿನಲ್ಲಿ ಆಸೆ ಇಟ್ಟುಕೊಂಡು ಸಹಾಯ ಮಾಡುವೆಯಾದರೆ ಅದು ಪ್ರೀತಿಯಲ್ಲ. ಅವನಿಗೆ ಸಹಾಯ ಮಾಡುವುದರಿಂದ ಜನಪ್ರಿಯತೆ ದೊರೆಯಲಿ, ನೀನು ದೆಹಲಿಗೆ ಹೋಗಲು ಗೆಳೆಯರು ಸಹಾಯಮಾಡುವಂತಾಗಲಿ ಎಂದು ನೀನು ಬಯಸಿದ್ದರೆ ಅದು ಪ್ರೀತಿಯಲ್ಲ. ಹಸಿದವನ ಬಗ್ಗೆ ನಿನಗೆ ಪ್ರೀತಿ ಇದ್ದರೆ ಬೇರೆ ಯಾವುದೇ ಉದ್ದೇಶವಿಲ್ಲದೆ, ಯಾವ ಪ್ರತಿಫಲವನ್ನೂ ಅಪೇಕ್ಷಿಸದೆ ಅವನಿಗೆ ಅನ್ನ ಹಾಕುತ್ತೀಯೆ. ನೀನು ಅವನಿಗೆ ಅನ್ನ ಹಾಕಿದರೂ ಆತ ನಿನ್ನ ಬಗ್ಗೆ ಕೃತಜ್ಞನಾಗಿರದಿದ್ದರೆ ನಿನ್ನ ಮನಸ್ಸಿಗೆ ನೋವಾಗುತ್ತದೆಯೇ? ಹಾಗಾದರೆ ನಿನ್ನಲ್ಲಿ ಅವನ ಬಗ್ಗೆ ಪ್ರೀತಿ ಇಲ್ಲ. ನಿನ್ನಿಂದ ಅನ್ನವನ್ನು ಪಡೆದವನು ನೀನೆಷ್ಟು ಒಳ್ಳೆಯವನೆಂದು ಊರಲ್ಲೆಲ್ಲ ಹೇಳಿಕೊಂಡು ಬಂದರೆ ನಿನಗೆ ಸಂತೋಷವಾಗುತ್ತದೆಯೇ? ಹಾಗಿದ್ದರೆ ನೀನು ನಿನ್ನ ಬಗ್ಗೆಯೇ ಯೋಚಿಸುತ್ತಿರುವೆ. ಅವನ ಬಗ್ಗೆ ನಿನ್ನಲ್ಲಿ ಪ್ರೀತಿ ಇಲ್ಲ. ನಾವು ಯಾರಿಗಾದರೂ ಸಹಾಯಮಾಡುವಾಗ ಅದರಿಂದ ನಮಗೇನಾದರೂ ಲಾಭವಾಗಲಿ ಎಂಬ ಯೋಚನೆ ನಮ್ಮಲ್ಲಿದೆಯೇ ಎಂಬ ಬಗ್ಗೆ ಸದಾ ಎಚ್ಚರವಿರಬೇಕು. ಹಸಿದವರಿಗೆ ಅನ್ನ ನೀಡುವಾಗ ನಮ್ಮ ಉದ್ದೇಶವೇನಿದೆ ಎಂಬ ಎಚ್ಚರವಿರಬೇಕು.

"ಬೇರೆ ಎಲ್ಲಕ್ಕಿಂತ ಧ್ಯಾನವೇ ಮುಖ್ಯವಾಗುವುದೊಂದು ಅಚ್ಚರಿ; ಅದಕ್ಕೆ ಆರಂಭವೂ ಇಲ್ಲ, ಅಂತ್ಯವೂ ಇಲ್ಲ. ಅದು ಮಳೆಯ ಹನಿಯಂತೆ. ಆ ಹನಿಯಲ್ಲೇ ಎಲ್ಲಾ ತೊರೆಗಳು, ನದಿಗಳು, ಸಮುದ್ರಗಳು ಮತ್ತು ಜಲಪಾತಗಳು ಅಡಕವಾಗಿವೆ. ಆ ಮಳೆಯ ಹನಿಯೇ ಭೂಮಿ ಹಾಗೂ ಮನುಷ್ಯನನ್ನು ಪೊರೆಯುತ್ತದೆ. ಅದಿಲ್ಲದ ಭೂಮಿ ಒಂದು ಮರುಭೂಮಿ ಹೇಗೋ ಹಾಗೆ ಧ್ಯಾನವಿಲ್ಲದ ಹೃದಯ ಒಂದು ಮರುಭೂಮಿ; ಬಂಜರು ನೆಲ".

– ಜೆ ಕೃಷ್ಣಮೂರ್ತಿ

ಪ್ರಶ್ನೆ : ಮನಸ್ಸು ಆಡಚಣೆಗಳನ್ನು ದಾಟಿ ಮುಂದೆ ಸಾಗುವುದು ಹೇಗೆ?

ಕೃಷ್ಣಮೂರ್ತಿ : ಆಡಚಣೆಗಳನ್ನು ಮೀರಿ ಸಾಗಬೇಕಾದರೆ, ಮನಸ್ಸಿಗೆ ಅವುಗಳ ಅರಿವು ಇರಬೇಕು. ಅಲ್ಲವೇ? ನಿಮ್ಮದೇ ಮನಸ್ಸಿನ ಕೊರತೆಗಳನ್ನು, ಪರಿಮಿತಿಗಳನ್ನು ಗಡಿಗೆರೆಗಳನ್ನು ನೀವು ತಿಳಿದುಕೊಳ್ಳಬೇಕು. ಆದರೆ ಎಲ್ಲೋ ಕೆಲವರಿಗೆ ಮಾತ್ರ ಈ ಅರಿವು ಇದೆ. ನಮಗೂ ಇದೆ ಎಂದು ನಾವು ಹೇಳುತ್ತೇವೆ. ಅದು ಬರಿಯ ಮಾತು. ಇಲ್ಲೊಂದು ಅಡ್ಡಿ ಇದೆ. ಇದು ನನ್ನೊಳಗಿನದೇ ಪರಿಮಿತಿ. ನಾನು ಇದನ್ನು ಅರ್ಥ ಮಾಡಿಕೊಳ್ಳಬೇಕು. ಮೊದಲು ಇದರ ಅಸ್ತಿತ್ವವನ್ನು ಒಪ್ಪಿಕೊಳ್ಳುತ್ತೇನೆ. ಅನಂತರ ಅದು ಹೇಗೆ ಹುಟ್ಟಿಕೊಂಡಿತು. ಅದರ ಸಮಗ್ರ ಸ್ವರೂಪವೇನು ಎಂದು ಕಂಡುಕೊಳ್ಳುತ್ತೇನೆ. ಹೀಗೆ ನಾವು ಎಂದಿಗೂ ಯೋಚಿಸುವುದಿಲ್ಲ. ರೋಗವಿದೆಯೆಂದು ತಿಳಿದುಕೊಂಡರೆ ಅದನ್ನು ಗುಣಪಡಿಸುವ ಸಾಧ್ಯತೆಯಿದೆ. ಆದರೆ, ರೋಗದ ಅಸ್ತಿತ್ವವನ್ನು, ಮನಸ್ಸಿನ ಮಿತಿಗಳನ್ನು ಬಾಧೆ-ಬಂಧನಗಳನ್ನು ತಿಳಿಯಬೇಕಾದರೆ ಅವುಗಳನ್ನು ಹೀನಾಯ ಮಾಡಬಾರದು. ಅವು ಸರಿ ಅಥವಾ ತಪ್ಪು ಎಂದು ತೀರ್ಮಾನ ಕೊಡಬಾರದು. ಬದಲಾಗಿ ಪೂರ್ವಾಗ್ರಹವಿಲ್ಲದೆ, ಅಭಿಪ್ರಾಯವಿಲ್ಲದೆ ಎಚ್ಚರದಿಂದ ಅವುಗಳನ್ನು ಗಮನಿಸಬೇಕು. ಅದು ಅತ್ಯಂತ ಕಷ್ಟ. ಏಕೆಂದರೆ ನಮ್ಮನ್ನು ಬೆಳೆಸಿರುವುದೇ ಹಾಗೆ.

ನಿಮ್ಮ ತಾತ್ವಿಕತೆಗಳು, ಧರ್ಮಗಳು, ಆಚರಣೆಗಳು, ಜನಾಂಗಿಕ ವಿಧಿ ನಿಷೇಧಗಳು ಇವೆಲ್ಲವನ್ನೂ ಬದಿಗಿಡಿ. ಏಕೆಂದರೆ ಅವು ಜೀವನವಲ್ಲ. ಅವುಗಳ ಬಲೆಯಲ್ಲಿ ಸಿಲುಕಿಕೊಂಡರೆ ಎಂದೆಂದಿಗೂ ಜೀವನವನ್ನು ಕಂಡುಕೊಳ್ಳಲು ಸಾಧ್ಯವಿಲ್ಲ. ಸದಾ ಕಾಲವೂ ಜೀವನವನ್ನು ಕಂಡು ಕೊಳ್ಳುವುದರಲ್ಲಿ ನಿಮಗೆ ನೆರವಾಗುವುದು ಶಿಕ್ಷಣದ ಉದ್ದೇಶವಲ್ಲವೇ?

ಒಂದು ಮಗುವನ್ನು ಅರ್ಥಮಾಡಿಕೊಳ್ಳಬೇಕಾದರೆ ಅದನ್ನು ಹೀನಾಯ ಮಾಡಬಾರದು. ಹಾಗೆ ಮಾಡುವುದರಲ್ಲಿ ಅರ್ಥವೇ ಇಲ್ಲ. ಮಗು ಆಡುವಾಗ, ಅಳುವಾಗ, ತಿನ್ನುವಾಗ ಎಲ್ಲ ಎಲ್ಲ ಭಾವಸ್ಥಿತಿಗಳಲ್ಲಿ ಗಮನವಿಟ್ಟು ನೋಡಬೇಕು. ಅವನು ಕುರೂಪಿ, ದಡ್ಡ, ಅದು, ಇದು ಎಂದು ಹೇಳುತ್ತಲೇ ಇದ್ದರೆ ಇಂತಹ ಪರಿಶೀಲತೆ ಸಾಧ್ಯವಿಲ್ಲ. ಅದೇ ರೀತಿ, ಮನಸ್ಸಿಗಿರುವ ಆಡಚಣೆಗಳನ್ನು-ಕೇವಲ ಮೇಲು ಮೇಲಿನ ಆಡಚಣೆಗಳನ್ನು ಮಾತ್ರವಲ್ಲ, ಸುಪ್ತ ಪ್ರಜ್ಞೆಯಲ್ಲಿ ಹುದುಗಿರುವ ಆಳವಾದ ಆಡಚಣೆಗಳನ್ನು-ಯಾವುದೇ ತಿರಸ್ಕಾರವಿಲ್ಲದೆ ನೋಡಲು ಸಾಧ್ಯವಾದರೆ ಆಗ ಮನಸ್ಸು ಅವುಗಳನ್ನು ಮೀರಿ ಮುಂದೆ ಸಾಗುತ್ತದೆ. ಇಂತಹ ಮೀರುವಿಕೆಯೇ ಸತ್ಯದ ಕಡೆಗಿನ ಚಲನೆಯೂ ಹೌದು.

ಕೃತಿ: "ಪ್ರೀತಿ ಎಂದರೆನು?
ಅನುವಾದ: ಓ ಎಲ್ ನಾಗಭೂಷಣ ಸ್ವಾಮಿ
ಮೂಲ: **Life Ahead**



WHAT ARE YOU DOING WITH YOUR LIFE?



KRISHNAMURTI TO HIMSELF



LEAVING SCHOOL ENTERING LIFE

ಈ ಹೊಸ ಪುಸ್ತಕಗಳು ವಸಂತ ಪ್ರಕಾಶನ ಹಾಗು ಎಲ್ಲಾ ಪ್ರಸ್ತುತ ಪುಸ್ತಕ ಮಳಿಗೆಗಳಲ್ಲಿ ಲಭ್ಯವಿರುತ್ತವೆ. ತಿಂಗಳ ಮೊದಲ ಭಾನುವಾರದ ಸಂವಾದ ಸಭೆಯ ಬಳಿಕ ಶಾಲಾ ಆವರಣದಲ್ಲಿ ಹಾಗೂ ಕೃಷ್ಣಮೂರ್ತಿ ಅಧ್ಯಯನ ಕೇಂದ್ರದಲ್ಲಿ ಕೃತಿಗಳು ಲಭ್ಯವಿರುತ್ತವೆ.



ಬೆಂಗಳೂರು ಅಧ್ಯಯನ ಕೇಂದ್ರದ ಪ್ರಕಟಣೆ

Retreat Schedule 2023 - 2024.

June 13-16th	Harmony in Relationships (3-Day weekend program)
July 11 -14th	What does it mean to be a 'Responsible Parent'?
Aug 8- 11th	Living in the Grip of Fear - what does it do to you?
Sept 12-15th	Education and the 'Understanding of Life
Oct 3-6th	Why do I resist 'CHANGE'?

ಕನ್ನಡದಲ್ಲಿ ಲಭ್ಯವಿರುವ ಜೆ.ಕೃಷ್ಣಮೂರ್ತಿ ಪುಸ್ತಕಮಾಲೆ

೧. ಜೆ.ಕೆ. ಜೀವನ – ದರ್ಶನ
ಅನು. ಡಾ. ನಿ. ಮುರಾರಿ ಬಲ್ಲಾಳ — ರೂ.೧೩೦/-

೨. ಧ್ಯಾನ ಚಿಂತನ
ಅನು. ಡಾ. ನಿ. ಮುರಾರಿ ಬಲ್ಲಾಳ — ರೂ. ೫೦/-

೫. ಶಿಕ್ಷಣ ಮತ್ತು ಜೀವನ
ಅನು. ಪ್ರೊ.ಎಚ್.ಎಸ್.ರಾಘವೇಂದ್ರ ರಾವ್ — ರೂ. ೬೫/-

೬. ಅನುದಿನ ಚಿಂತನ
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ — ರೂ.೪೦೦/-

೭. ಹಿಂಸೆಯನ್ನು ಮೀರಿ
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ — ರೂ.೧೫೦/-

೮. ಭಯ, ಸ್ವಾತಂತ್ರ್ಯ ಮತ್ತು ಶಿಕ್ಷಣ
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ — ರೂ.೨೦/-

೧೫. ಬಾಳಿಗೊಂದು ಭಾಷ್ಯ - ಸಂಪುಟ ೧
ಅನು. ಡಾ. ಮಹಾಬಲೇಶ್ವರ ರಾವ್ — ರೂ.೩೨೦/-

೧೬. ಬಾಳಿಗೊಂದು ಭಾಷ್ಯ - ಸಂಪುಟ ೨
ಅನು. ಡಾ. ಮಹಾಬಲೇಶ್ವರ ರಾವ್ — ರೂ.೧೫೦/-

೧೭. ಬಾಳಿಗೊಂದು ಭಾಷ್ಯ - ಸಂಪುಟ ೩
ಅನು. ಡಾ. ಮಹಾಬಲೇಶ್ವರ ರಾವ್ — ರೂ.೧೮೫/-

೧೮. ಮೊದಲ ಹಾಗೂ ಕೊನೆಯ ಬಿಡುಗಡೆ
ಅನು. ರುಕ್ಮಿಣಿ ಕೃಷ್ಣಮೂರ್ತಿ — ರೂ.೩೫೦/-

೧೯. ಭಯ ನಿಮಗೇನು ಮಾಡೀತು?
ಅನು. ಎಸ್. ದಿವಾಕರ್ — ರೂ.೪೦/-

೨೦. ಇನ್ನೊಬ್ಬರ ಬಗ್ಗೆ ಕಾಳಜಿ - ಹಾಗೆಂದರೇನು?
ಅನು. ಪ್ರೊ.ಎಚ್.ಎಸ್.ರಾಘವೇಂದ್ರ ರಾವ್ — ರೂ.೪೦/-

೨೧. ಸ್ವಾತಂತ್ರ್ಯ ಎಂದರೇನು?
ಅನು. ಗಿರೀಶ್ ವಾಫ್ — ರೂ.೪೦/-

೨೨. ಶಿಕ್ಷಣ
ಅನು. ಎಸ್.ಡಿ. ಕಾಶೀಕರ — ರೂ.೯೦/-

೨೩. ಬದುಕಿನ ಕಡೆಗೆ
ಅನು. ಎಸ್.ಡಿ. ಕಾಶೀಕರ ಮತ್ತು ವನಮಾಲಾ ಆರ್. ರಾವ್ — ರೂ.೧೪೦/-

೨೫. ನೀವೇ ಲೋಕ, ನಿಮ್ಮೊಳಗೇ ಲೋಕ
ಅನು. ಡಾ. ಮಹಾಬಲೇಶ್ವರ ರಾವ್ — ರೂ. ೧೦೦/-

೩೫. ಒಲವು ಒಂಟಿತನ
ಅನು. ಡಾ. ಮಹಾಬಲೇಶ್ವರ ರಾವ್ — ರೂ.೧೫೦/-

೩೬. ಸಂಕಷ್ಟಮಯ ಜಗತ್ತಿನ ಜೊತೆ ಮುಖಾಮುಖಿ
ಅನು. ಡಾ. ಮಹಾಬಲೇಶ್ವರ ರಾವ್ — ರೂ.೧೫೦/-

೩೭. ಒಳಜಗತ್ತು
ಅನು. ಡಾ. ಮಹಾಬಲೇಶ್ವರ ರಾವ್ — ರೂ.೧೮೦/-

೩೮. ಸಾಮಾಜಿಕ ಜವಾಬ್ದಾರಿ
ಅನು. ಡಾ. ಮಹಾಬಲೇಶ್ವರ ರಾವ್ — ರೂ.೧೧೦/-

೩೯. ಶಿಕ್ಷಕನಿಗೆ ಶಿಕ್ಷಣ
ಅನು. ಡಾ. ಬಿ.ಬಿ. ರಾಜಪುರೋಹಿತ್ — ರೂ. ೫೦/-

೪೦. ನಿಮ್ಮ ಜೀವನ ನಿಮ್ಮ ಕೈಯಲ್ಲಿದೆಯೆ? — ರೂ. ೨೦೦/-
ಅನು. ಡಾ. ಮಹಾಬಲೇಶ್ವರ ರಾವ್

೪೧. ಲೋಕ ಶಿಕ್ಷಕ
ಅನು. ಡಾ. ಮಹಾಬಲೇಶ್ವರ ರಾವ್ — ರೂ.೨೫೦/-

೪೨. ಕೃಷ್ಣಮೂರ್ತಿ ಆತ್ಮಸಂಗಾತ — ರೂ. ೧೩೦/-
ಅನು. ಡಾ. ಮಹಾಬಲೇಶ್ವರ ರಾವ್

೪೩. ಮುಗಿದ ಶಾಲೆ ತೆರೆದ ಜೀವನ — ರೂ.೨೧೦/-
ಅನು. ಡಾ. ಮಹಾಬಲೇಶ್ವರ ರಾವ್

ಕನ್ನಡ ಪುಸ್ತಕಗಳು ೨೦% ರಿಯಾಯಿತಿ ಬೆಲೆಯಲ್ಲಿ ಹಾಗೂ ಆಂಗ್ಲ ಪುಸ್ತಕಗಳು ೪೦% ರಿಯಾಯಿತಿ ಬೆಲೆಯಲ್ಲಿ ಮತ್ತು KFI ಪ್ರಕಟಿತ ಕನ್ನಡ ಪುಸ್ತಕಗಳು ೫೦% ರಿಯಾಯಿತಿಯಲ್ಲಿ ಲಭ್ಯವಿರುತ್ತವೆ.

ಕನ್ನಡ ಭಾಷಾಂತರ ಸಮಿತಿ ಸದಸ್ಯರು:
ಡಾ|| ಎಚ್. ಎಸ್. ರಾಘವೇಂದ್ರರಾವ್
ಪ್ರೊ|| ಓ. ಎಲ್. ನಾಗಭೂಷಣ ಸ್ವಾಮಿ
ಡಾ|| ವನಮಾಲಾ ವಿಶ್ವನಾಥ್

Published by:
Editor: Smt. Sushama Inamdar
The Study Bangalore Education Centre
Krishnamurti Foundation India
Thataguni Post, Bangalore - 560082

Contact Information:
Mob: 8317419451
Email: kfistudy@gmail.com
Website: www.kfistudy.org